time, because of some land disputes. Even now the dispute is going on regarding some agriculture research centre, land has to be handed over to water supply for intermediate pumping and sumping. Now the revised estimate will cost about Rs. 17 crores. We have already spent Rs. 12.86 crores. The total estimate we have already spent. Anyhow the Hyderabad-Karnataka Development Fund has come to our rescue. They have also provided 2-3 crores. I think this year if they provide a little more money, Government will also see that enough money is provided in the budget and we will see the work is completed. Only by December 1992 we can give bulk supply of water, but not purified water. Treatment plant will take time. We can give treated water by next year June. By December 1992 we can give untreated water to Gulbarga city and also for the coming water scarcity days as the Hon. Minister has already spoken to the Chief Minister. Government is going to release some fund. We will drill borewells in that area as much as possible.

SRI QUAMARUL ISLAM:- You can rest assured that there will not be any problem as far as release of funds is concerned. To-day budget is there. You have fixed 4 crores.

MR .SPEAKER:- Why don't you wait till 3.30 p.m to-day. You will know about it.

ಯಲ್ಲಾಪುರ ತಾಲ್ಲೂಕಿನಲ್ಲಿ ಅಂಕೋಲಾದ ಕೆಲವು ಭಾಗವನ್ನು ಹೊಸದಾಗಿ ಪ್ರಾರಂಭಿಸಿದ ಪೋಲೀಸ್ ಠಾಣೆಯ ವ್ಯಾಪ್ತಿಗೆ ಸೇರಿಸುವುದು.

112(504) ಶ್ರೀ ಉಮೇಶ್ ಭಟ್ (ಅಂಕೋಲಾ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಯಾಲ್ಲಾಪುರ ತಾಲ್ಲೂಕಿನಲ್ಲಿ ಅಂಕೋಲಾದ ಕೆಲವು ಭಾಗವನ್ನೂ ಹೊಸದಾಗಿ ಪ್ರಾರಂಭಿಸಿದ ಕದ್ರ ಪೋಲೀಸ್ ಠಾಣೆಯ ವ್ಯಾಪ್ತಿಯೂ ಸುಮಾರು 50 ಕಿ.ಮೀ.ಗಿಂತ ಅಧಿಕ ದೂರವಿದ್ದು, ಆ ಕ್ಷೇತ್ರದ ಜನರಿಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ತೊಂದರೆಯನ್ನು ನಿವಾರಿಸಲು ಈ ಭಾಗಗಳನ್ನು ಪುನಃ ಯಾಲ್ಲಾಪುರ ಠಾಣೆಯ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಜಿಲ್ಲಾ ಪರಿಷತ್ ಉಪಾಧ್ಯಕ್ಷರು ಮತ್ತು ಮಾನ್ಯ ಸದಸ್ಯ ಶ್ರೀ ದೇಶಪಾಂಡೆಯವರು ಸಹಾ ಸ್ಥಳೀಯ ಅಧಿಕಾರಿಗಳಿಗೆ ಇತ್ತೀಚೆಗೆ ಪತ್ರ ಬರೆದು ತಿಳಿಸಿದ್ದಾರೆ.

ಆ) ಸ್ಥಳೀಯ ಅಧಿಕಾರಿಗಳು ಈ ಸಲಹೆಯನ್ನು ಪರಿಶೀಲಿಸಿ ಕಳಸ ಕೊಳಸಳ್ಳಿ ಮತ್ತು ಬಾರೆ ಈ ಮೂರು ಗ್ರಾಮಗಳನ್ನು ಯಲ್ಲಾಪುರ ಠಾಣೆ ವ್ಯಾಪ್ತಿಯಲ್ಲೇ ಮುಂದುವರಿಸಲು ಸಲಹೆ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಪ್ರಸ್ತಾವನೆ ಬಂದ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲಾಗುತ್ತೆ.

ಅಧ್ಯಕ್ಷರು:- ಪೋಲೀಸ್ ಠಾಣೆಗಳಿಗೆ ಸಂಬಂಧಪಟ್ಟ ಹಾಗೆ ಇನ್ನೂ ಮೂರು ಪ್ರಶ್ನೆಗಳು ಇವೆ. ಅವನ್ನೂ ಮಾನ್ಯ ಸದಸ್ಯರು ಕೇಳಿದ ಮೇಲೆ ಮಾನ್ಯ ಗೃಹ ಮಂತ್ರಿಗಳು ಒಂದೇ ಸಾರಿ ಉತ್ತರ ಕೊಡಬಹುದು. ಶ್ರೀ ಎಂ. ಶ್ರೀನಿವಾಸಯ್ಯನವರು, ಶ್ರೀ ಬಿ.ಆರ್. ಗುರುದೇವ್ ಅವರು

ಅಧ್ಯಕ್ಷರು:- ಉಮೇಶ್ ಭಟ್ ಅವರೇ, ತಮ್ಮ ಉಪಪ್ರಶ್ನೆ ಕೇಳಿ.

ಶ್ರೀ ಉಮೇಶ್ ಭಟ್:- ಮಾನ್ಯ ಅಧ್ಯಕ್ಷರೇ, ನನ್ನ ಮೊದಲ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆದರೆ ನಾನು ಇಲ್ಲಿ ಏನು ಪ್ರಶ್ನೆ ಕೇಳಿದ್ದೆ ಎಂದರೆ, ಅಂಕೋಲಾ ತಾಲ್ಲೂಕಿನ ಯಲ್ಲಾಪುರ ನನ್ನ ಕ್ಷೇತ್ರದಲ್ಲಿ ಬರುತ್ತದೆ ಎಂದು ಹೇಳಿದ್ದೆ. ಆದರೆ ಯಲ್ಲಾಪುರ ತಾಲ್ಲೂಕಿನಲ್ಲಿ ಅಂಕೋಲಾದ ಕೆಲವೊಂದು ಪಾರ್ಟ್ ಬಂದಿವೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ. ಅದು ಅಂಕೋಲಾ ಕ್ಷೇತ್ರದ ಯಲ್ಲಾಪುರ ತಾಲ್ಲೂಕಿನ ಕೆಲವೊಂದು ಪಾರ್ಟ್ ನನಗೆ ಬರುತ್ತದೆ. ಅದು ನಾನು ಕೇಳಿದ ಪ್ರಶ್ನೆ ಆಗಿತ್ತು. ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ಇನ್ನೊಂದು ಪ್ರಶ್ನೆಗೆ ಸ್ಥಳೀಯ ಅಧಿಕಾರಿಗಳಿಂದ ಬಂದ ಕೂಡಲೇ ವಿಚಾರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅದು ಯಾವಾಗ ಬರುತ್ತದೆ? ಮತ್ತು ಕೂಡಲೇ ಅದನ್ನು ಮಾಡಬಹುದೇ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೇ, ತಾವು ಮೂರು ಜನ ಮಾನ್ಯ ಸದಸ್ಯರುಗಳಿಗೆ ಪೋಲೀಸ್ ಸ್ಟೇಷನ್‌ಗಳಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೀರಿ. ಯಲ್ಲಾಪುರದ ಪೋಲೀಸ್ ಸ್ಟೇಷನ್ ಬಗ್ಗೆ ಸಹ ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಎಕ್ಸಿಸ್ಟಿಂಗ್ ಪೋಲೀಸ್ ಠಾಣೆಗಳನ್ನು ಹೆಚ್ಚು ಮಾಡಬೇಕೆಂದು 1992-93ನೇ ಸಾಲಿನಲ್ಲಿ 40 ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ಈಗಾಗಲೇ ಅನುಮತಿಯನ್ನು ಕೊಟ್ಟಿದೆ. ಹೋದ ವರ್ಷ 1991-92ನೇ ಸಾಲಿನಲ್ಲಿ 15 ಪೋಲೀಸ್ ಠಾಣೆಗಳನ್ನು ಮತ್ತು 10 ಔಟ್ ಪೋಸ್ಟ್ ಪೋಲೀಸ್ ಠಾಣೆಗಳನ್ನು ಮಾಡಲಾಗಿತ್ತು. 50 ಕಿಲೋಮೀಟರ್ ದೂರದಲ್ಲಿ ಎಲ್ಲಿ ಪೋಲೀಸ್ ಠಾಣೆಗಳು ಇಲ್ಲ ಅಂತಹ ಕಡೆ ಪೋಲೀಸ್ ಠಾಣೆಗಳು ಬೇಕೆಂದು ಪ್ರಪೋಸಲ್ಸ್‌ಗಳು ಸರ್ಕಾರಕ್ಕೆ ಬರುತ್ತಾ ಇವೆ. ಅದು ಬಂದ ತಕ್ಷಣ ವಿಚಾರ ಮಾಡೋಣ. ಮಾನ್ಯ ಸದಸ್ಯರಾದ ಗುರುದೇವ್‌ರವರು ಸಕಲೇಶಪುರದಲ್ಲಿ ಔಟ್ ಪೋಸ್ಟ್ ಪೋಲೀಸ್ ಠಾಣೆ ಮಾಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ನಾನು ಸಹ ಅಲ್ಲಿಗೆ ಹೋದಾಗ ಸಕಲೇಶಪುರದಲ್ಲಿ ಔಟ್ ಪೋಸ್ಟ್ ಪೋಲೀಸ್ ಠಾಣೆಯನ್ನು ಮಾಡಿಸಬೇಕೆಂದು ಹೇಳಿದ್ದೆ. ಅದನ್ನು ಈ ಸಾಲಿನಲ್ಲಿ ಮಾಡಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಪ್ರತಾಪ ಚಂದ್ರಶೆಟ್ಟಿಯವರು ಕುಂದಾಪುರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇದೆಲ್ಲವೂ ಸಹ ಸರ್ಕಾರದ ಗಮನಕ್ಕೆ ಬಂದಿದೆ. ಯಾರು ಪ್ರಶ್ನೆ ಕೇಳಿದ್ದಾರೆ ಅವರಿಗೆ ಕೊಡಬೇಕೆಂದು ಅಲ್ಲ, ಪೋಲೀಸ್ ಠಾಣೆಗಳ ಬಗ್ಗೆ ಐಡಂಟಿಫೈ ಮಾಡಿ ಎಲ್ಲೆಲ್ಲಿ ಪೋಲೀಸ್ ಠಾಣೆಯ ಅವಶ್ಯಕತೆಯಿದೆ ಎಂದು ನೋಡಿಕೊಂಡು ಜನಸಂಖ್ಯೆಗೆ ಅನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಠಾಣೆಗಳನ್ನು ಹೆಚ್ಚಿಸಬೇಕು. ಏಕೆಂದರೆ, ನಮ್ಮಲ್ಲಿ ಈಗ 679 ಪೊಲೀಸ್ ಠಾಣೆಗಳಿವೆ; ಅವು ಸಾಲದು. 1992-93ನೇ ಸಾಲಿನಲ್ಲಿ ಮಾನ್ಯ ಸದಸ್ಯರು ಎಲ್ಲೆಲ್ಲಿ ಪೋಲೀಸ್ ಠಾಣೆಗಳು ಬೇಕೆಂದು ಕೇಳಿದ್ದಾರೆ ಅಂತಹ ಕಡೆಗಳಿಗೆ ಪೋಲೀಸ್ ಠಾಣೆಗಳನ್ನು ಕೊಡಲಾಗುವುದು ಮಾನ್ಯ ದೇಶಪಾಂಡೆಯವರು ಸಹ ಕೇಳಿದ್ದಾರೆ. ಅವರು ಎಲ್ಲಿ ಬೇಕೆಂದು ಹೇಳುತ್ತಿದ್ದಾರೆ ಅಲ್ಲಿ ಅವರು ಕೇಳಿದಷ್ಟು ಪೋಲೀಸ್ ಠಾಣೆಗಳನ್ನು 1992-93ನೇ ಸಾಲಿನಲ್ಲಿ ನಾವು ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇನೆ.

ಶ್ರೀ ಉಮೇಶ್ ಭಟ್:- ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಜಾಗ ಯಲ್ಲಾಪುರದಿಂದ ಕದರಾಕ್ಕೆ ಹೋಗಬೇಕಾದರೆ ಸುಮಾರು 160 ಕಿಲೋಮೀಟರ್ ದೂರ ಹೋಗಬೇಕಾಗುತ್ತದೆ. ತಾಲ್ಲೂಕು ಆಫೀಸು ಇತರ ಬೇರೆ ಬೇರೆ ಆಫೀಸುಗಳು ಯಲ್ಲಾಪುರದಲ್ಲೇ ಇವೆ. ಆದರೆ ಪೋಲೀಸ್ ಠಾಣೆ ಮಾತ್ರ ಬೇರೆ ತಾಲ್ಲೂಕಿನಲ್ಲಿವೆ. ಅದು ಕಾರವಾರ ತಾಲ್ಲೂಕಿನಲ್ಲಿದೆ. ಪೋಲೀಸ್ ಠಾಣೆಯಿರುವ ಕದರಾಗೆ ನಾವು ಇಲ್ಲಿಂದ ಹೋಗಬೇಕಾದರೆ 160 ಕಿಲೋಮೀಟರ್ ಹೋಗಬೇಕಾಗುತ್ತದೆ. ಆದ್ದರಿಂದ ಅದನ್ನು ಯಲ್ಲಾಪುರ ತಾಲ್ಲೂಕಿಗೆ ಮಂತ್ರಿಗಳು ಮಾಡಿಸಿಕೊಡುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಸದಸ್ಯರಿಗೆ ನಿಜವಾಗಿಯೂ ತೊಂದರೆಯಾಗಿದ್ದರೆ ಅದರ ಬಗ್ಗೆ ಗಮನಕೊಟ್ಟು ಮಾಡುತ್ತೇನೆ.

ಶ್ರೀ ಬಿ.ಆರ್. ಗುರುದೇವ್:- ಮಾನ್ಯ ಅಧ್ಯಕ್ಷರೆ, ಈಗತಾನೆ ಮಂತ್ರಿಗಳು 52 ಕಿಲೋಮೀಟರ್ ದೂರದಲ್ಲಿ ಬರುವಂತಹ ಠಾಣೆಗಳು ಏನಿವೆ ಅವುಗಳನ್ನು ಮಾಡಿಕೊಡುತ್ತೇನೆಂದು ಆಶ್ವಾಸನೆ ನೀಡಿದ್ದಾರೆ. ನಾನು ಎರಡು ಹೋಬಳಿಗಳ ಬಗ್ಗೆ ಕೇಳಿದ್ದೇವೆ. ತಮಗೆ ಗೊತ್ತಿರುವ ಹಾಗೆ, ನನ್ನದು ಮಲೆನಾಡು ಪ್ರದೇಶ. ಒಂದು ಸ್ಟೇಷನ್‌ನಿಂದ ಇನ್ನೊಂದು ಸ್ಟೇಷನ್‌ಗೆ ಹೋಗಬೇಕಾದರೆ 60 ಕಿಲೋಮೀಟರ್ ಆಗುತ್ತದೆ. ಇನ್ನೊಂದು ಹಾನಗಾಳುಗೆ ಪೋಲೀಸ್ ಠಾಣೆ ಬೇಕೆಂದು ಕೇಳುತ್ತಿದ್ದೇನೆ. ಈಗಿರುವ ಠಾಣೆಯಿಂದ ನಾನು ಕೇಳುತ್ತಿರುವ ಜಾಗಕ್ಕೆ 30 ಕಿಲೋಮೀಟರ್ ಆದರೂ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಮತ್ತು ಅತಿಮುಖ್ಯವಾಗಿ ಅಲ್ಲಿ ಕೋಮುಗಲಭೆಯಾಗಿ ನನ್ನ ಕ್ಷೇತ್ರದಲ್ಲಿ ನಾಲ್ಕು ಕೊಲೆಗಳಾಯಿತು. ಅದಕ್ಕೆ ಪರಿಹಾರ ಸಿಕ್ಕಿದೆ. ಆಧ್ಯತೆಯ ಮೇಲೆ ನನ್ನ ಕ್ಷೇತ್ರಕ್ಕೆ ಪೋಲೀಸ್ ಠಾಣೆಗಳನ್ನು ಕೊಡಬೇಕೆಂದು ಮನವಿ ಮಾಡಿದ್ದೆ. ಎರಡನೆಯದಾಗಿ, ಅತಿಮುಖ್ಯವಾಗಿ ಈಗತಾನೆ ಮಂತ್ರಿಗಳು ಹೇಳಿದರು. ಯಾರು ಪ್ರಶ್ನೆ ಕೇಳಲಿ ಕೇಳದಿರಲಿ, ಕೊಡುತ್ತೇವೆಂದು ಹೇಳಿದ್ದಾರೆ, ಸಂತೋಷ. ಆದ್ಯತೆಯ ಮೇಲೆ ಗಮನ ಕೊಟ್ಟು ಮಾಡುತ್ತೇವೆಂದು ಹೇಳಿದ್ದಾರೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಇಲ್ಲಿಗೆ ಒಂದು ಪೋಲೀಸ್ ಠಾಣೆ ಬೇಕೆಂದು ಮೇಲಧಿಕಾರಿಗಳಿಗೆ ರೆಕಮಂಡ್ ಮಾಡಿದ್ದರು. ಮೊನ್ನೆ ನೋಡಿದ ಪಟ್ಟಿಯಲ್ಲಿ ನನ್ನ ಕ್ಷೇತ್ರಕ್ಕೆ ಒಂದು ಸ್ಟೇಷನ್ ಆಗಲಿ ಅಥವಾ ಔಟ್ ಪೋಸ್ಟ್ ಪೋಲೀಸ್ ಠಾಣೆಯಾಗಲಿ ಒಂದನ್ನು ಕೂಡ ಸೇರಿಸಿಲ್ಲ. ಈ ವರ್ಷ ಸೇರಿಸುವುದಕ್ಕೆ ಪ್ರಯತ್ನ ಮಾಡಿಯೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಈ ಡಿಮಾಂಡ್ಸ್ ಮುಗಿದ ಮೇಲೆ ಏಪ್ರಿಲ್ ತಿಂಗಳಿನಲ್ಲಿ ಕೊಡುತ್ತೇನೆ.

ಶ್ರೀ ಪಿ. ಬಸವರಾಜ್:- ನಾವು ಕೇಳುತ್ತಿರುವ ಪೋಲೀಸ್ ಠಾಣೆ ಹೊಸ ಅಂಗಡಿಯಲ್ಲಿ. ಅಲ್ಲಿ ಸರ್ಕಾರದ ವಿದ್ಯುತ್ ಯೋಜನೆ ಕಾರ್ಯಾರಂಭವಾಗಿದೆ. ಮತ್ತು ನೀರಾವರಿ ಯೋಜನೆ ಮಂಜೂರಾತಿಯ ಹಂತದಲ್ಲಿದೆ. ಈ ಜಾಗದಿಂದ ಕುಂದಾಪುರದಿಂದ ಪೋಲೀಸ್ ಠಾಣೆಗೆ ಅಂತರ ಸುಮಾರು 50-60 ಕಿಲೋಮೀಟರ್ ಆಗುತ್ತದೆ. ಅಲ್ಲಿ ಸಮಾಜಘಾತುಕ ಶಕ್ತಿಗಳ ವಿರುದ್ಧ ಅಲ್ಲಿ ಜನರಿಗೆ ರಕ್ಷಣೆ ನೀಡುವುದಕ್ಕೆ ಒಂದು ಪೋಲೀಸ್ ಠಾಣೆ ಬೇಕು ಮತ್ತು ಕರ್ನಾಟಕ ಪವರ್ ಕಾರ್ಪೊರೇಷನ್‌ರವರು ಕಟ್ಟಡವನ್ನು ಪೊಲೀಸ್ ಠಾಣೆಗೋಸ್ಕರ ನಿಚನೆ ಮಾಡಿದ್ದಾರೆ. ಅದು ಈಗ ಖಾಲಿಯಿದೆ. ಈ ವರ್ಷ ಇಲ್ಲಿ ಪೋಲೀಸ್ ಠಾಣೆಯನ್ನು ಕಾರ್ಯಾರಂಭ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್:- ದಕ್ಷಿಣ ಕನ್ನಡ ಜಿಲ್ಲೆಗೆ ಏನೆಲ್ಲ ಬೇಕೆಂಬ ಬಗ್ಗೆ ವರ್ತಮಾನ ನಮ್ಮಲ್ಲಿದೆ. 50-60 ಕಿಲೋಮೀಟರ್ ದೂರದಲ್ಲಿ ಪೋಲೀಸ್ ಸ್ಟೇಷನ್ ಇಲ್ಲದಿರತಕ್ಕದ್ದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ.

ಅಧ್ಯಕ್ಷರು:- ಮಾನ್ಯ ಸದಸ್ಯರುಗಳಾದ ಹಂಪನಗೌಡರು ಮತ್ತು ಏಕಾಂತಯ್ಯನವರೆ ತಮ್ಮ ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರ ಕೊಡಲು ಸಮಯ ಕೇಳಿದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಸಮಯಬೇಕು. ಮಾನ್ಯ ಸದಸ್ಯರು ಕಾಲುವೆ ವಿಚಾರ, ಡಿಸ್ಟ್ರಿಬ್ಯೂಟರಿ ವಿಚಾರ ಕೇಳಿದ್ದಾರೆ. ಇರಿಗೇಷನ್ ಮಿನಿಸ್ಟ್ರಿಯಿಂದ ಉತ್ತರ ತರಿಸಬೇಕು, ಅದಕ್ಕಾಗಿ ಸ್ವಲ್ಪ ಟೈಮ್ ಬೇಕು

8ನೇ ಪಂಚವಾರ್ಷಿಕ ಯೋಜನೆಯ ವೆಚ್ಚ.

115(774) ಶ್ರೀ ಆರ್.ಬಿ. ಚೌಧರಿ (ಸಿಂಧಗಿ):- ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 8ನೇ ಪಂಚವಾರ್ಷಿಕ ಯೋಜನೆಯ ಅಂದಾಜು ವೆಚ್ಚ ಎಷ್ಟು?

2) ಇದರಲ್ಲಿ ಕೃಷ್ಣಾ ಮೇಲ್ದಂಡೆಗೆ ಒದಗಿಸಲಾಗಿರುವ ಹಣ ಎಷ್ಟು?

ಶ್ರೀ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು.):-

1) ಪ್ರಸ್ತಾಪಿಸಲಾದ ವೆಚ್ಚ ರೂ.11000-00 ಕೋಟಿಗಳು.

2) ಕೃಷ್ಣಾ ಮೇಲ್ದಂಡೆ ಯೋಜನೆ, ಹಂತ-1ಕ್ಕೆ ಪ್ರಸ್ತಾಪಿಸಲಾದ ವೆಚ್ಚ ರೂ.927-57 ಕೋಟಿಗಳು.